**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಹಾಸನ.**

**ಎಸ್ ಸಿ ನಂ.105/2023**

ಪಿಡಬ್ಲ್ಯೂ: 5
ಸಿಡಬ್ಲ್ಯೂ: 10

| | | |
|---|---|---|
| ಸಾಕ್ಷಿದಾರರ ಹೆಸರು | : | ಸೋಮೇಗೌಡ |
| ತಂದೆಯ ಹೆಸರು | : | ಪರ್ವತೇಗೌಡ |
| ವಯಸ್ಸು | : | 55 ವರ್ಷ |
| ವೃತ್ತಿ | : | ಪೊಲೀಸ್ ಇನ್ಸ್ಪೆಕ್ಟರ್, ಆಲ್ದೂರು ಪೊಲೀಸ್ ಠಾಣೆ |
| ವಾಸ | : | ಆಲ್ದೂರು |

**ದಿನಾಂಕಃ 10.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿನಾಂಕಃ20.01.2021 ರಿಂದ 17.10.2022 ರವರೆಗೆ ಅರಸೀಕೆರೆ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಇನ್ಸ್ಪೆಕ್ಟರ್ ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 01.09.2022 ರಂದು ಸಂಜೆ 6.30 ಗಂಟೆ ಸಮಯದಲ್ಲಿ ಪ್ರಕರಣದ ಫಿರ್ಯಾದುದಾರರಾದ ಉಷಾರಾಣಿ ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದುಕೊಂಡು ಠಾಣಾ ಮೊಃನಂಃ 141/2022 ರಲ್ಲಿ ಭಾರತೀಯ ದಂಡ ಸಂಹಿತೆ ಕಲಂ.498(ಎ), 307, 355, 341 ಸಹಕಲಂ. 34ರ ಅಡಿ ಪ್ರಕರಣವನ್ನು ದಾಖಲು ಮಾಡಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ನಿಪಿ-1 ಫಿರ್ಯಾದನ್ನು ಪಡೆದುಕೊಂಡ ಬಗ್ಗೆ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-1(ಬಿ) ಎಂದು

ಗುರುತಿಸಲಾಯಿತು. ಸಾಕ್ಷಿದಾರರು ಗುರುತಿಸಿದ ಪ್ರಥಮ ವರ್ತಮಾನ ವರದಿಯನ್ನು ನಿಪಿ–18 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ–18(ಎ) ಎಂದು ಗುರುತಿಸಲಾಯಿತು.

2. ದಿನಾಂಕಃ 02.09.2022 ರಂದು ಮಧ್ಯಾಹ್ನ 1 ಗಂಟೆ ಸಮಯದಲ್ಲಿ ಕೃತ್ಯ ನಡೆದ ಸ್ಥಳವಾದ ಫಿರ್ಯಾದುದಾರರು ವಾಸವಿದ್ದ ಅರಸೀಕೆರೆ ಪಟ್ಟಣದ ಮಾರುತಿ ನಗರದ 2ನೇ ಅಡ್ಡರಸ್ತೆಯಲ್ಲಿರುವ ಗೀತಾಮಣಿ ರವರಿಗೆ ಸೇರಿದ ಮನೆಯ ಮೊದಲನೆ ಮಹಡಿಯಲ್ಲಿ ಪ್ರಕರಣದ ಫಿರ್ಯಾದುದಾರರಾದ ಉಷಾರಾಣಿ ರವರು ಹಾಜರಿದ್ದು ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಪಂಚರಾದ ಮಿಲನ್ ಕುಮಾರ್ ಹಾಗೂ ನಾಗರಾಜ ರವರ ಸಮಕ್ಷಮ ಕೃತ್ಯ ನಡೆದ ಸ್ಥಳದ ಮಹಜರನ್ನು ತಯಾರಿಸಿರುತ್ತೇನೆ ಹಾಗೂ ಕೃತ ಸ್ಥಳದ 3 ಫೋಟೋಗಳನ್ನು ಸಹ ತೆಗೆಸಿರುತ್ತೇನೆ. ನಿಪಿ–2 ಸ್ಥಳ ಮಹಜರಿನಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–2(ಸಿ) ಎಂದು ಗುರುತಿಸಲಾಯಿತು. ನಿಪಿ–3 ರಿಂದ 5 ಫೋಟೋಗಳು ನಿಪಿ–2 ಮಹಜರ್ ಕಾಲದಲ್ಲಿ ತೆಗೆಯಲಾದ ಫೋಟೋಗಳು ಆಗಿರುತ್ತವೆ ಎಂದು ಸಾಕ್ಷಿದಾರರು ಗುರುತಿಸಿರುತ್ತಾರೆ. ಅದೇ ದಿನ ಮಧ್ಯಾಹ್ನ ಸುಮಾರು 2.15 ಗಂಟೆ ಸಮಯಕ್ಕೆ ಅರಸೀಕೆರೆ ಟೌನ್ ಮಾರುತಿನಗರದ ಆಫೀಸರ್ಸ್ ಕ್ಲಬ್ ಸಮೀಪ ಇರುವ 2ನೇ ಆರೋಪಿ ಭೈರಪ್ಪರವರ ಕಾಲಭೈರವೇಶ್ವರ ನಿಲಯದ ಮುಂದೆ ಪ್ರಕರಣದ ಫಿರ್ಯಾದುದಾರರಾದ ಉಷಾರಾಣಿ ರವರು ಸ್ಥಳ ತೋರಿಸಿದ ಮೇರೆಗೆ ಪಂಚರಾದ ನಾಗರಾಜು ಹಾಗೂ ಬಾಬು ರವರ ಸಮಕ್ಷಮ ಸ್ಥಳ ಮಹಜರನ್ನು ತಯಾರಿಸಿ ಒಂದು ಫೋಟೋವನ್ನು ಸಹ ತೆಗೆಸಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ಸ್ಥಳ ಮಹಜರ್ ಈಗಾಗಲೇ ನಿಪಿ–6 ಎಂದು ಗುರುತಿಸಲಾಗಿದ್ದು ನಿಪಿ–6ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–6(ಬಿ) ಎಂದು ಗುರುತಿಸಲಾಯಿತು. ನಿಪಿ–6 ಮಹಜರ್ ಕಾಲದಲ್ಲಿ ತೆಗೆಯಲಾದ ಫೋಟೋ ನಿಪಿ–7 ಆಗಿರುತ್ತದೆ ಎಂದು ಸಾಕ್ಷಿದಾರರು ಗುರುತಿಸಿರುತ್ತಾರೆ. ನಿಪಿ–6 ಮಹಜರ್ ಬರೆದ ಸ್ಥಳದಲ್ಲಿ ಫಿರ್ಯಾದುದಾರರು ಆಕೆಯ ಗಂಡ 2ನೇ ಮದುವೆ ಆಗಿದ್ದ ಬಗ್ಗೆ ಉಳಿದ ಆರೋಪಿಗಳನ್ನು ಪ್ರಶ್ನಿಸಿದಾಗ ಅವರು ತನಗೆ ಬೈದು ಚಪ್ಪಲಿಯಿಂದ ಹೊಡೆಯುವುದಾಗಿ ತಿಳಿಸಿದ ಸ್ಥಳ ಎಂದು ಗುರುತಿಸಿರುತ್ತಾರೆ. ನಿಪಿ–6 ಮಹಜರನ್ನು ಮಧ್ಯಾಹ್ನ 2.15 ರಿಂದ 3.00 ಗಂಟೆಯವರೆಗೆ ಬರೆಯಲಾಯಿತು. ಅದೇ ದಿನ ಸಂಜೆ 5 ಗಂಟೆ ಸಮಯಕ್ಕೆ ಪ್ರಕರಣದ ಫಿರ್ಯಾದುದಾರರು ನನ್ನ ಕಚೇರಿಗೆ ಹಾಜರಾಗಿ ತಮ್ಮ ಮದುವೆಗೆ ಸಂಬಂಧಿಸಿದ ಫೋಟೋಗಳು ಹಾಗೂ

ಲಗ್ನಪತ್ರಿಕೆಯನ್ನು ಹಾಜರುಪಡಿಸಿದ್ದು ಅವುಗಳನ್ನು ಪಂಚರಾದ ಮಿಲನ್ ಕುಮಾರ್ ಹಾಗೂ ನಾಗರಾಜ್ ರವರ ಸಮಕ್ಷಮ ಸಂಜೆ 5 ರಿಂದ 6 ಗಂಟೆಯವರೆಗೆ ಅಮಾನತ್ತು ಮಹಜರ್ ತಯಾರಿಸಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ನಿಪಿ–8 ಅಮಾನತ್ತು ಮಹಜರಿನಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–8(ಸಿ) ಎಂದು ಗುರುತಿಸಲಾಯಿತು. ನಿಪಿ–8 ಮಹಜರಡಿಯಲ್ಲಿ ಅಮಾನತ್ತುಪಡಿಸಿಕೊಂಡ ವಿವಾಹದ ಆಹ್ವಾನಪತ್ರಿಕೆ ನಿಪಿ–9 ಹಾಗೂ ವಿವಾಹ ಕಾಲದ ಫೋಟೋಗಳು ನಿಪಿ–10 ರಿಂದ 15 ಆಗಿರುತ್ತವೆ ಎಂದು ಸಾಕ್ಷಿದಾರರು ಗುರುತಿಸಿರುತ್ತಾರೆ.  ಅದೇ ದಿನ ಚಾಸಾ–1 ಉಷಾರಾಣಿ ರವರ ಮುಂದುವರಿದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ–4 ಮಿಲನ್ ಕುಮಾರ್, ಚಾಸಾ–5 ಬಾಬು ಹಾಗೂ ಚಾಸಾ–9 ನಾಗರಾಜ್ ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿಗಳ ಪತ್ತೆಗಾಗಿ ಸಿಬ್ಬಂದಿಯವರನ್ನು ನೇಮಕ ಮಾಡಿರುತ್ತೇನೆ. ಅದೇ ದಿನ ಸಂಜೆ 7.45 ಗಂಟೆ ಸಮಯದಲ್ಲಿ 1ನೇ ಆರೋಪಿ ಜಯಪ್ರಸಾದ್ ರವರನ್ನು ನಾನು ಹಾಗೂ ನನ್ನ ಸಿಬ್ಬಂದಿಯವರು ಅರಸೀಕೆರೆ ಪಟ್ಟಣದಲ್ಲಿ ವಶಕ್ಕೆ ಪಡೆದು ನನ್ನ ಕಚೇರಿಗೆ ಕರೆತಂದಿರುತ್ತೇವೆ. ಆರೋಪಿತನನ್ನು ದಸ್ತಗಿರಿ ಮಾಡಿ ಆತನನ್ನು ವಿಚಾರಣೆಗೆ ಒಳಪಡಿಸಿರುತ್ತೇನೆ. ನಂತರ 1ನೇ ಆರೋಪಿಯನ್ನು ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ನ್ಯಾಯಾಲಯವು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿರುತ್ತದೆ.

3. ದಿಃ29.09.2022ರಂದು ಆರೋಪಿ–2 ರಿಂದ 5 ರವರು ನಿರೀಕ್ಷಣಾ ಜಾಮೀನು ಪಡೆದು ನನ್ನ ಕಚೇರಿಗೆ ಹಾಜರಾಗಿದ್ದು ಅವರನ್ನು ದಸ್ತಗಿರಿ ಮಾಡಿ ಠಾಣಾ ಜಾಮೀನು ಪಡೆದು ಬಿಡುಗಡೆ ಮಾಡಿರುತ್ತೇನೆ. ತನಿಖಾ ಕಾಲದಲ್ಲಿ ಕೃತ್ಯ ನಡೆದ ಸ್ಥಳಗಳಿಗೆ ಸಂಬಂಧಿಸಿದಂತೆ ನಗರಸಭೆಯಿಂದ ನಿಪಿ–16 ಹಾಗೂ 17 ರಂತೆ ಆಸ್ತಿ ತೆರಿಗೆ ಬೇಡಿಯ ದೃಢೀಕರಣ ಪತ್ರಗಳನ್ನು ಪಡೆದುಕೊಂಡಿರುತ್ತೇನೆ. ನಿಪಿ–16 ಹಾಗೂ 17 ಆಸ್ತಿ ತೆರಿಗೆ ಬೇಡಿಕೆಯ ದೃಢೀಕರಣ ಪತ್ರಗಳನ್ನು ಪಡೆದುಕೊಂಡ ಬಗ್ಗೆ ಸಾಕ್ಷಿದಾರರು ಗುರುತಿಸಿದ ಅವರ ಸಹಿಗಳನ್ನು ಕ್ರಮವಾಗಿ ನಿಪಿ–16(ಎ) ಹಾಗೂ ನಿಪಿ–17(ಎ) ಎಂದು ಗುರುತಿಸಲಾಯಿತು. ದಿಃ 13.10.2022 ರಂದು ಚಾಸಾ–2 ತಿಮ್ಮಯ್ಯ ಹಾಗೂ ಚಾಸಾ–3 ಸರಸ್ವತಿ ರವರ ಹೇಳಿಕೆಗಳನ್ನು ಸಹ ಪಡೆದಿರುತ್ತೇನೆ. ದಿಃ07.11.2022 ರಂದು ನಾನು ವರ್ಗಾವಣೆಗೊಂಡ ಕಾರಣ ಮುಂದಿನ ತನಿಖೆಯನ್ನು

ಚಾಸಾ–11 ರವರು ಪಡೆದುಕೊಂಡಿರುತ್ತಾರೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ 1 ರಿಂದ 5 ಆರೋಪಿಗಳನ್ನು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ ಹೆಚ್ ಜಿ ವಕೀಲರಿಂದ**

4. ನಾನು ತಿಳಿಸಿರುವಂತೆ ದಿಃ01.09.2022 ರಂದು ಫಿರ್ಯಾದುದಾರರು ಠಾಣೆಗೆ ಹಾಜರಾಗಿಲ್ಲ ಹಾಗೂ ನಿಪಿ–1 ರಂತೆ ಯಾವುದೇ ಫಿರ್ಯಾದನ್ನು ದಾಖಲಿಸಿಲ್ಲ ಎಂದರೆ ಸರಿಯಲ್ಲ. ನಿಪಿ–1 ಫಿರ್ಯಾದನ್ನು ನಾನೇ ಪ್ರಕರಣಕ್ಕಾಗಿ ಸೃಷ್ಟಿಸಿ ಮಾಡಿರುತ್ತೇನೆಂದರೆ ಸರಿಯಲ್ಲ. ನಿಪಿ–2 ಮಹಜರನ್ನು ನಾನು ಠಾಣೆಯಲ್ಲಿಯೇ ಸೃಷ್ಟಿ ಮಾಡಿದ್ದು ಅದನ್ನು ಗೀತಾಮಣಿ ರವರ ಬಾಡಿಗೆ ಮನೆಯಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ–3 ರಿಂದ 5 ಫೋಟೋಗಳು ನಿಪಿ–2 ಮಹಜರಿಗೆ ಸಂಬಂಧಪಟ್ಟ ಫೋಟೋಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–6 ಮಹಜರನ್ನು 2ನೇ ಆರೋಪಿತನ ಮನೆಯ ಮುಂದೆ ತಯಾರಿಸಿಲ್ಲ ಎಂದರೆ ಸರಿಯಲ್ಲ. ನಿಪಿ–7 ಫೋಟೋವಿಗೂ ನಿಪಿ–2 ಮಹಜರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಫಿರ್ಯಾದುದಾರರು ನನ್ನ ಮುಂದೆ ಯಾವುದೇ ಲಗ್ನಪತ್ರಿಕೆ ಅಥವಾ ವಿವಾಹದ ಫೋಟೋಗಳನ್ನು ಹಾಜರುಪಡಿಸಿಲ್ಲ ಹಾಗೂ ನಾನು ಅವುಗಳನ್ನು ನಿಪಿ–8 ಮಹಜರಡಿಯಲ್ಲಿ ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ಯಾವುದೇ ಆರೋಪಿ ಎಸಗದಿದ್ದರೂ ಸಹ ಮನೆಯಲ್ಲಿದ್ದ ಆತನನ್ನು ನಮ್ಮ ಕಚೇರಿಗೆ ಕರೆತಂದು ಸುಳ್ಳು ಪ್ರಕರಣದಲ್ಲಿ ಆತನನ್ನು ಸಿಲುಕಿಸಲಾಗಿದೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಸಾಕ್ಷಿದಾರರು ನನ್ನ ಮುಂದೆ ಯಾವುದೇ ಹೇಳಿಕೆಗಳನ್ನು ನೀಡದಿದ್ದರೂ ಸಹ ಪ್ರಕರಣಕ್ಕಾಗಿ ಸಾಕ್ಷಿದಾರರ ಹೇಳಿಕೆಗಳನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ರಿಂದ 5ನೇ ಆರೋಪಿ ಪರ ಶ್ರೀ ಜೆ ಪಿ ವಕೀಲರಿಂದ**

5. ನಾನು ಕಳೆದ 20 ವರ್ಷಗಳಿಂದ ಪೊಲೀಸ್ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಫಿರ್ಯಾದುದಾರರು ದೂರನ್ನು ನೀಡಿದ ಆಧಾರದ ಮೇಲೆ ಅದನ್ನು ಪರಿಶೀಲನೆ ಮಾಡಿ ಪ್ರಕರಣ ದಾಖಲ್ಮಾಡುತ್ತೇವೆಂದರೆ ಸರಿ. ದೂರಿನ ಆಧಾರದ ಮೇಲೆ ಪ್ರಕರಣವನ್ನು ಕಲಂ ಹಾಗೂ ಕಾಯಿದೆಗಳ ಆಧಾರದ ಮೇಲೆ ದಾಖಲಿಸುತ್ತೇವೆಂದರೆ ಸರಿ. ಈ ಪ್ರಕರಣದಲ್ಲಿ ಭಾರತೀಯದಂಡ ಸಂಹಿತೆ ಕಾಯಿದೆ ಕಲಂ.307ನ್ನು 1ನೇ ಆರೋಪಿತ ಆತನ ಪತ್ನಿಯನ್ನು ಕತ್ತು ಹಿಸುಕಿ ಕೊಲೆ ಮಾಡಲು ಪ್ರಯತ್ನಿಸಿದ ಬಗ್ಗೆ

ಸೇರಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ–2 ರಿಂದ 5 ರವರ ವಿರುದ್ಧ ಬೇರೆ ಭಾರತೀಯ ದಂಡ ಸಂಹಿತೆಗಳ ಅಡಿಯಲ್ಲಿ ಪ್ರಕರಣ ದಾಖಲು ಮಾಡಲಾಗಿದೆ. ಫಿರ್ಯಾದುದಾರರಿಗೆ ಅನುಕೂಲ ಮಾಡುವ ಉದ್ದೇಶದಿಂದ ಪ್ರಥಮ ವರ್ತಮಾನ ವರದಿಯಲ್ಲಿ ಭಾರತೀಯ ದಂಡ ಸಂಹಿತೆಯ ಕಲಂಗಳನ್ನು ಸೇರಿಸಲಾಗಿದೆ ಎಂದರೆ ಸರಿಯಲ್ಲ. ನಾನು 2ನೇ ಆರೋಪಿತನ ಮನೆಯ ಬಳಿ ಭೇಟಿ ನೀಡಿ ಯಾವುದೇ ಮಹಜರ್ ತಯಾರಿಸಿಲ್ಲ ಹಾಗೂ ಯಾವುದೇ ಫೋಟೋವನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. 2 ರಿಂದ 5ನೇ ಆರೋಪಿಗಳು ಯಾವುದೇ ಕೃತ್ಯ ಎಸಗದಿದ್ದರೂ ಸಹ ಫಿರ್ಯಾದುದಾರರಿಗೆ ಅನುಕೂಲ ಮಾಡುವ ಉದ್ದೇಶದಿಂದ ಅವರನ್ನು ಈ ಪ್ರಕರಣದಲ್ಲಿ ಸೇರಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಫಿರ್ಯಾದುದಾರರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿದಾರರನ್ನು ಸೃಷ್ಟಿಸಿ ಸುಳ್ಳು ಹೇಳಿಕೆಗಳನ್ನು ಪಡೆಯಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್

ನ್ಯಾಯಾಧೀಶರು, ಹಾಸನ.